**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,**

**ಪೊನ್ನಂಪೇಟೆ.**

**ಸಿ.ಸಿ. ನಂ. 529/2025 ಫ್ರಾ.ಸಾ – 8**

**ಚಾ.ಸಾ – 9**

**ದಿನಾಂಕಃ 27.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಬಿ. ಎಂ. ಪ್ರಮೋದ ಕುಮಾರ್ |
| ತಂದೆಯ ಹೆಸರು | : | ಲೇಟ್ ಬಿ ಎಸ್ ಮುತ್ತಪ್ಪ ರೈ |
| ವಯಸ್ಸು | : | 54ವರ್ಷ |
| ಉದ್ಯೋಗ | : | ಸಹಾಯಕ ಉಪ ನೀರಿಕ್ಷಕರು |
| ವಾಸ ಸ್ಥಳ | : | ಪೊನ್ನಂಪೇಟೆ |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ–**

ನಾನು 2024 ಜೂನ್ ರಿಂದ 2025 ಆಗಸ್ಟ್ ವರೆಗೆ ಶ್ರೀಮಂಗಲ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. 21.01.2025 ರಂದು ಸಮಯ ಮ. 12.15 ಕ್ಕೆ ಚಾಸಾ 1 ರವರು ಠಾಣೆಗೆ ಬಂದು ದೂರು ನೀಡಿರುತ್ತಾರೆ. ಅದರಂತೆ ನಾನು ಪ್ರಕರಣ FIR ದಾಖಲಿಸಿ ನ್ಯಾಯಾಲಯಕ್ಕೆ ಮತ್ತು ಮೇಲಾದಿಕಾರಿಗಳಿಗೆ ಸಲ್ಲಿಸಿರುತ್ತೇನೆ. ಚಾಸಾ 2 ರವರನ್ನು ಗೋಣಿಕೊಪ್ಪ ಸರ್ಕಾರಿ ಆಸ್ಪತ್ರೆಗೆ ಅದೇ ದಿನಕಳುಹಿಸಿದೆ. ದಿ. 22.01.2025 ರಂದು ಕೃತ್ಯ ಸ್ಥಳವಾದ ವೆಸ್ಟ್ ನೆಮ್ಮಲೆ ಗ್ರಾಮದ ಚೊಟ್ಟೆಯಂಡ ಮಾಡ ಕುಟುಂಬಸ್ಥರ ಮನೆಗೆ ಹೋಗುವ ರಸ್ತೆಯ ಮಧ್ಯದಲ್ಲಿ ಸ್ಥಳ ಮಹಜರ್ ಮಾಡಿರುತ್ತೇವೆ. ಚಾಸಾ 1 ರವರು ಹಾಜರಿದ್ದು ಕೃತ್ಯ ನಡೆದ ವೇಳೆ ಧರಿಸಿದ್ದ ಚೂಡಿದಾರ್ ಟಾಪ್ ಅನ್ನು ಹಾಜರುಪಡಿಸಿದ್ದು ಪಂಚರಾದ ಚಾಸಾ 4 ಮತ್ತು 5 ರವರ ಸಮಕ್ಷಮ ಮಹಜರ್ ಜರುಗಿಸಿ ಸಹಿ ಮಾಡಿದ ಚೀಟಿ ಹಾಕಿ ಅದನ್ನು ವಶಪಡಿಸಿಕೊಂಡಿರುತ್ತೇನೆ. ಚಾಸಾ 8 ರವರು ಮಹಜರ್ ವೇಳೆ ವಿಡಿಯೋ ಮತ್ತು ಫೋಟೋ ತೆಗೆದರು ಮತ್ತು ಅವರು electronic ಸಾಕ್ಷ್ಯಪ್ರಮಾಣ ಪತ್ರ ನೀಡಿರುತ್ತಾರೆ. ನಂತರ ಈ ಮು ಮಾ ಗಳನ್ನು ಮಾಲುಪಟ್ಟಿಯಲ್ಲಿ

ಆಳವಡಿಸಿರುತ್ತೇನೆ. ಸಾಕ್ಷಿದಾರರಾದ ಚಾಸಾ 2 ರಿಂದ 5 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ.

ದಿ. 23.01.2025 ರಂದು ಆರೋಪಿತರಿಗೆ ತನಿಖೆಗೆ ಹಾಜರಾಗಲು ನೋಟೀಸ್ ನೀಡಿರುತ್ತೇನೆ. ದಿ. 24.01.2025 ರಂದು ಕೃತ್ಯ ಸ್ಥಳದ ದಾಖಲೆ ಪಡೆಯಲು ಚಾಸಾ 7 ರವರೆ ಪತ್ರ ಬರೆದಿರುತ್ತೇನೆ. ದಿ. 29.01.2025 ರಂದು ಚಾಸಾ 7 ರವರು ಕೃತ್ಯ ಸ್ಥಳದಲ್ಲಿ ರಸ್ತೆ ಇರುವುದಾಗಿ ದೃಡೀಕರಣ ಪತ್ರ ನೀಡಿರುತ್ತಾರೆ. ದಿ. 02.02.2025 ರಂದು ಗೋಣಿಕೊಪ್ಪ ಸರ್ಕಾರಿ ಆಸ್ಪತ್ರೆಯಿಂದ ಚಾಸಾ 1 ಮತ್ತು 2 ರವರ ಗಾಯದ ಪ್ರಮಾಣ ಪತ್ರಗಳನ್ನು ಪಡೆದಿರುತ್ತೇನೆ. ಆರೋಪಿಗಳ ವಿರುದ್ದ ದೋಷರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ.

ಸಾಕ್ಷಿಯು FIR ಅನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 10 ಎಂದು ಗುರುತಿಸಲಾಯಿತು. ಸಾಕ್ಷಿಯು ನಿ ಪಿ 1, 2, 5, 6, 9ಗಳಲ್ಲಿ ಸಹಿ ನೋಡಿ ಗುರುತಿಸಿದ್ದು ಸಹಿಗಳನ್ನು ನಿ ಪಿ 1(ಬಿ), 2(ಇ), 5(ಎ), 6(ಬಿ), 9(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಗಾಯದ ಪ್ರಮಾಣ ಪತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ ಪಿ 11 ಮತ್ತು 12 ಎಂದು, ಸಹಿಗಳನ್ನು ನಿ ಪಿ 11(ಎ) ಮತ್ತು 12(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಆರೋಪಿತರನ್ನು ಮತ್ತು ಮು ಮಾ 1 ಅನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಮಹಜರ್ ವೇಳೆ ತೆಗೆದ ಫೋಟೋವನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಸಿ. ಪಿ. ಪಿ. ವಕೀಲರಿಂದಃ</u>**

ಚಾಸಾ 1 ಮತ್ತು 2 ರವರು ದೂರು ಕೊಟ್ಟಾಗ ಇದ್ದರು. ದೂರು ದಾಖಲಾದ ನಂತರ ಗಾಯಾಳುಗಳನ್ನು ಆಸ್ಪತ್ರೆಗೆ ಕಳುಹಿಸಿರುತ್ತೇನೆ. ಗದ್ದೆಗೆ ಹೋಗುವ ರಸ್ತೆಯ ವಿಚಾರವಾಗಿ ಜೆ ಸಿ ಬಿ ತಂದು ತೊಂದರೆ ಮಾಡಿರುವ ವಿಚಾರಕ್ಕೆ ದೂರು ನೀಡಿರುತ್ತಾರೆ. ಜೆ ಸಿ ಬಿ ವಿವರಗಳು ಮತ್ತು ಅದರ ಚಾಲಕನ ವಿವರಗಳು ನಾನು ಪಡೆಯಲಿಲ್ಲ, ಏಕೆಂದರೆ ಮರುದಿನ ಹೋದೆವು ಅಲ್ಲಿ ಅದು ಇರಲಿಲ್ಲ. ಚೊಟ್ಟೆಯಂಡ ಮಾಡ

ಕುಟುಂಬಸ್ಥರಿಗೆ ಸೇರಿದ ರಸ್ತೆ ಎಂದು ತನಿಖೆಯಿಂದ ಗೊತ್ತಾಯಿತು. ಆ ರಸ್ತೆ ಮೂಲಕ ಹೋದರೆ ಆರೋಪಿಗಳು ಮತ್ತು ಗಾಯಳುಗಳ ಮನೆಗಳು ಸಿಗುತ್ತದೆ. ನಾನು ತನಿಖೆ ಸರಿಯಾಗಿ ಮಾಡಿರುವುದಿಲ್ಲ, ಅದೇ ರಸ್ತೆಯಲ್ಲಿ ಮುಂದುವರೆದರೆ ಆರೋಪಿಗಳ ತೋಟ ಸಿಗುವುದು ಎಂದರೆ ಅವರ ತೋಟ ಸಿಗಬಹುದು.

ಮ. 01.30 ನಂತರ ದೂರು ಪಡೆದುಕೊಂಡು ಅವರುಗಳನ್ನು ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇನೆ. ಚಿಕಿತ್ಸೆ ಪಡೆದು ಎಷ್ಟು ಹೊತ್ತಿಗೆ ಗಾಯಳುಗಳು ಮನೆಗೆ ಹೋದರು ಗೊತ್ತಿಲ್ಲ. ಮು ಮಾ 1  meroon ಬಣ್ಣ ಅಲ್ಲ ನೇರಳೆ ಬಣ್ಣ ಎಂದರೆ ವ್ಯತ್ಯಾಸ ಇರಬಹುದು, ಆದರೆ ಬಟ್ಟೆ ಅದೇ ಆಗಿರುತ್ತದೆ. ಯಾವುದೇ ಕೃತ್ಯ ಆಗಿರುವುದಿಲ್ಲ ಮತ್ತು ಮು ಮಾ 1 ಚಾಸಾ 1ರವರದ್ದಲ್ಲ ಮತ್ತು ಅದು ಹರಿದಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ 4 ಮತ್ತು 5 ರವರು ಮು ಮಾ 1 ಅನ್ನು ಅಮಾನತು ವೇಳೆ ಗುರುತಿಸಿದರು. ರಸ್ತೆ ವಿಚಾರವಾಗಿ ಆರೋಪಿಗಳಿಗೂ ಚಾಸಾ 1 ಮತ್ತು 2 ರವರಿಗೂ ಪಂಚಾಯಿತಿ ಕಚೇರಿಯಲ್ಲಿ ವ್ಯಾಜ್ಯ ಇರುವ ಬಗ್ಗೆ ಗೊತ್ತಿಲ್ಲ. ಫೋಟೋದಲ್ಲಿ ಕಾಣುವ ಸ್ಥಳ ಕೃತ್ಯ ಸ್ಥಳವಲ್ಲ ಅದು ಸೃಷ್ಟಿತ ದಾಖಲೆ ಎಂದರೆ ಸರಿಯಲ್ಲ. ಸದರಿ ರಸ್ತೆಯಿಂದ ಆರೋಪಿಗಳು ತೋಟಕ್ಕೆ ಹೋಗಬೇಕಾಗಿರುತ್ತದೆ, ಆರೋಪಿಗಳು ಅವಿವಾಹಿತರಾಗಿದ್ದು ಅವರಿಂದ ಆ ತೋಟವನ್ನು ಹೊಡೆದುಕೊಳ್ಳಲು ರಸ್ತೆಯ ವ್ಯಾಜ್ಯ ಸುಳ್ಳು ವ್ಯಾಜ್ಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ದೋಷರೋಪಣಾ ಪಟ್ಟಿಯಲ್ಲಿ ಆರೋಪಿತರ ವಿರುದ್ಧ ಯಾವುದೇ ಸಾಕ್ಷ್ಯದಾರಗಳು ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/-

ಸಿವಿಲ್ ನ್ಯಾಯಾಧೀಶರು

ಮತ್ತು ಪ್ರದನ್ಯಾದಂ., ಪೊನ್ನಂಪೇಟೆ